**ದಿನಾಂಕ ಡಿಸೆಂಬರ್ 18, 2008**

**“ಮೊದಲ ಸ್ವಾತಂತ್ರ್ಯ ಸಂಗ್ರಾಮ” – ಸ್ಮರಣಾರ್ಥ 5 ರೂಪಾಯಿ ಹೊಸ ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್) ನಾಣ್ಯ**

**ದಿನಾಂಕ ಡಿಸೆಂಬರ್ 18, 2008**

**“ಮೊದಲ ಸ್ವಾತಂತ್ರ್ಯ ಸಂಗ್ರಾಮ” – ಸ್ಮರಣಾರ್ಥ 5 ರೂಪಾಯಿ ಹೊಸ ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್) ನಾಣ್ಯ**

**“ಮೊದಲ ಸ್ವಾತಂತ್ರ್ಯ ಸಂಗ್ರಾಮ”** ಸಂದರ್ಭದ ಸ್ಮರಣಾರ್ಥ ಭಾರತ ಸರ್ಕಾರವು ನೀಡುತ್ತಿರುವ ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್) 5 ರೂಪಾಯಿಗಳ ಹೊಸ ನಾಣ್ಯಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಚಲಾವಣೆಗೆ ಬಿಡುಗಡೆ ಮಾಡಲಿದೆ.

| **ನಾಣ್ಯದ ಮೌಲ್ಯವರ್ಗ** | **ಆಕಾರ ಮತ್ತು ಹೊರಸುತ್ತಳತೆ** | **ತೂಕ** | **ಲೋಹಾಂಶ** |
|---|---|---|---|
| ಐದು ರೂಪಾಯಿಗಳು | ವೃತ್ತಾಕಾರ 23 ಮಿಮಿ ಸುರಕ್ಷತಾ ಅಂಚಿನೊಡನೆ. | 6 ಗ್ರಾಂ | ಫೆರಿಟಿಕ್ ಸ್ಟೈನ್‌ಲೆಸ್ ಸ್ಟೀಲ್ (ಎಫ್.ಎಸ್.ಎಸ್)<br><br>ಕಬ್ಬಿಣ 83%<br><br>ಕ್ರೋಮಿಯಮ್ 17% |

**ವಿನ್ಯಾಸ:**

**ಮುಂಭಾಗ:**

ನಾಣ್ಯದ ಮುಖ ಭಾಗವು **‘सत्यमेव जयते’** ಎಂಬ ಕೆಳಬರಹದೊಂದಿಗೆ ಅಶೋಕ ಸ್ತಂಭದ ಸಿಂಹದ ತಲೆಯನ್ನು ಹಾಗೂ ಮೇಲಿನ ಎಡಭಾಗದಲ್ಲಿ **‘भारत’** ಎಂಬ ಹಿಂದಿ ಪದವನ್ನು ಹಾಗೂ ಬಲಭಾಗದಲ್ಲಿ **“INDIA”** ಎಂಬ ಇಂಗ್ಲಿಷ್ ಪದವನ್ನು ಹೊಂದಿರುವುದು. ಸಿಂಹದ ತಲೆಯ ಕೆಳಭಾಗದಲ್ಲಿ ನಾಣ್ಯದ ಮೌಲ್ಯವಾದ “5” ಎಂದು ಅಂತರರಾಷ್ಟ್ರೀಯ ಸಂಖ್ಯೆಗಳಲ್ಲಿ ಬರೆದಿರುವುದು ಮತ್ತು ಕೆಳ ಎಡಭಾಗದಲ್ಲಿ **“रुपये”** ಎಂದು ಹಿಂದಿಯಲ್ಲಿ ಮತ್ತು ಬಲಭಾಗದಲ್ಲಿ **“Rupees”** ಎಂದು ಇಂಗ್ಲಿಷ್‌ನಲ್ಲಿ ಬರೆದಿರುವುದು.

**ಹಿಂಭಾಗ :**

ಜನರಲ್ ತಾತ್ಯಾ ಟೋಪೆ ಭಾವಚಿತ್ರವನ್ನು ಎಡಭಾಗದಲ್ಲಿ, ಚಕ್ರವರ್ತಿ ಬಹದ್ದೂರ್ ಷಾ **II** ಭಾವಚಿತ್ರವನ್ನು ಬಲಭಾಗದಲ್ಲಿ ಹಾಗೂ ಯುದ್ಧಭೂಮಿಯಲ್ಲಿ ಹೋರಾಡುತ್ತಿರುವ ಝಾನ್ಸಿ ರಾಣಿ ಲಕ್ಷ್ಮೀಬಾಯಿಯ ಭಾವಚಿತ್ರವನ್ನು ಮಧ್ಯಭಾಗದಲ್ಲಿ ಸಂಯೋಜಿಸಲಾಗಿದೆ.

ಎಡಭಾಗದಲ್ಲಿ **'प्रथम स्वतंत्रता संग्राम'** ಮತ್ತು **"150 वर्ष"** ಎಂಬ ಹಿಂದಿ ಪದಗಳನ್ನು ಮತ್ತು ಬಲಭಾಗದಲ್ಲಿ **"THE FIRST WAR OF INDEPENDENCE"** ಮತ್ತು "150 YEARS" ಎಂದು ಇಂಗ್ಲಿಷ್‌ನಲ್ಲಿ ಬರೆದಿರುವುದು ಮತ್ತು ಕೆಳಗಡೆ 1857–2007 ಅವಧಿಯನ್ನು ಬರೆಯಲಾಗಿದೆ.

**ಸುರಕ್ಷತಾ ಅಂಚು:**
ನಾಣ್ಯದ ಸುತ್ತಲಿನ ಭಾಗವು ಭದ್ರತಾ ಅಂಚನ್ನು ಹೊಂದಿರುವುದು. ಅಂಚಿನ ಮಧ್ಯಭಾಗವು ಅಲ್ಪ ಕೊರಕಲನ್ನು ಹೊಂದಿದ್ದು, ಖಾಲಿ ಜಾಗದಿಂದ ಪ್ರತ್ಯೇಕಿಸಲ್ಪಟ್ಟ ಎರಡು ಭಾಗಗಳ ಮಧ್ಯದಲ್ಲಿ ವಿನ್ಯಾಸವನ್ನು ಹೊಂದಿದೆ.

ವಿನ್ಯಾಸವು ಮಣಿಗಳ ಮಾಲೆಯ ರೂಪದಲ್ಲಿರುವುದು ಮತ್ತು ಮಣಿಗಳ ಮಧ್ಯೆ ಉಬ್ಬುಗಳಿರುತವೆ ಮತ್ತು ಪ್ರತಿ ಮಣಿಯೂ ತನ್ನ ಹಿಂಭಾಗದಲ್ಲಿ ಇರುವ ಉಬ್ಬಿನಲ್ಲಿ ಒಂದು ಗೆರೆಯನ್ನು ಹೊಂದಿರುತ್ತದೆ. ಒಟ್ಟು 30 ಗೆರೆಗಳು ಹಾಗೂ 30 ಮಣಿಗಳನ್ನು ಹೊಂದಿರುತ್ತದೆ.

1906ರ ನಾಣ್ಯ ಕಾಯಿದೆಯಲ್ಲಿ ಅವಕಾಶ ಕಲ್ಪಿಸಿದಂತೆ ನಾಣ್ಯವು ಶಾಸನಬದ್ಧ ನೀಡಿಕೆಯಾಗಿದೆ. ಹಾಲಿ ಇರುವ ಐದು ರೂಪಾಯಿ ನಾಣ್ಯಗಳೂ ವಿಧಿಮಾನ್ಯ ಚಲಾವಣೆಯಲ್ಲಿ ಮುಂದುವರಿಯುತ್ತವೆ.

**ಅಜಿತ್ ಪ್ರಸಾದ್**
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ : 2008 – 2009 / 922